ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ ,ಹುಲಕೋಟಿ, ಗದಗ ಜಿಲ್ಲೆ

# ಕೃಷಿ ದರ್ಪಣ

## ತ್ರೈಮಾಸಿಕ ಸುದ್ದಿ ಪತ್ರಿಕೆ

ಸಂಪುಟ–2 ಅಕ್ಟೋಬರ್–ಡಿಸೆಂಬರ, 2017 ತ್ರೈಮಾಸಿಕ ಪತ್ರಿಕೆ ಸಂಚಿಕೆ–3

### ವಿಶ್ವ ಮಣ್ಣು ಆರೋಗ್ಯ ದಿನಾಚರಣೆ



ದಿನಾಂಕ 05-12-2017 ರಂದು ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಗದಗ ಹಾಗೂ ತೋಟಗಾರಿಕೆ ಇಲಾಖೆ, ಗದಗ ಇವರ ಸಂಯುಕ್ತ ಆಶ್ರಯದಲ್ಲಿ "ವಿಶ್ವ ಮಣ್ಣು ಆರೋಗ್ಯ ದಿನಾಚರಣೆ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. "ಪೃಥ್ವಿಯ ಆರೈಕೆ ಮಣ್ಣಿನಿಂದ ಪ್ರಾರಂಭವಾಗುತ್ತದೆ" ಎಂಬ ಘೋಷವಾಕ್ಯದೊಂದಿಗೆ ಸಂಘಟಿಸಿದ ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ರೂಪಾ ಅಂಗಡಿ, ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ, ಗದಗ ಇವರು ನೆರವೇರಿಸಿದರು. ನಂತರ ಮಾತನಾಡಿದ ಅವರು ಮಣ್ಣಿನ ಕಣಗಳಿಂದ ಸಕಲ ಜೀವ ರಾಶಿಗೆ ಆಹಾರ ಉತ್ಪಾದನೆ ಆಗುತ್ತಿದ್ದು, ಪ್ರತಿ ಮಣ್ಣಿನ ಕಣವನ್ನು ಸಂರಕ್ಷಿಸುವ ಕಾರ್ಯ ತ್ವರಿತ ಗತಿಯಲ್ಲಿ ಆಗಬೇಕಾಗಿದೆ ಎಂದು ಹೇಳಿದರು. ಮುಂದಿನ ಪೀಳಿಗೆಗೆ ಆರೋಗ್ಯಕರ ಮಣ್ಣು ಹಾಗೂ ಸ್ವಚ್ಛ ಪರಿಸರವನ್ನು ಬಿಟ್ಟು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ರೈತರು ಮಣ್ಣಿನ ಆರೋಗ್ಯಕ್ಕಾಗಿ ವಿಶೇಷವಾಗಿ ಕಾಳಜಿ ವಹಿಸಬೇಕೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ್ದ ಶ್ರೀ ಎಸ್.ಪಿ.ಬಳಿಗಾರ, ಅಧ್ಯಕ್ಷರು, ಕೃಷಿ ಹಾಗೂ ಕೈಗಾರಿಕೆ ಸ್ಥಾಯಿ ಸಮಿತಿ, ಜಿಲ್ಲಾ ಪಂಚಾಯತ, ಗದಗ ಇವರು ಮಾತನಾಡಿ ಮಣ್ಣಿನ ಆರೋಗ್ಯಕ್ಕಾಗಿ ರೈತರು ಮಣ್ಣು ಹಾಗೂ ನೀರಿನ ಸಂರಕ್ಷಣೆ, ಮಣ್ಣು ಪರೀಕ್ಷೆ ಆಧಾರಿತ ಪೋಷಕಾಂಶಗಳ ಬಳಕೆ, ಸಾವಯವ ಗೊಬ್ಬರಗಳ ಬಳಕೆ ಹಾಗೂ ಹಸಿರೆಲೆ ಗೊಬ್ಬರಗಳನ್ನು ಬೆಳೆದು ಮಣ್ಣಿಗೆ ಸೇರಿಸಬೇಕೆಂದು ರೈತರಲ್ಲಿ ಕೋರಿದರು.

ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ಶಕುಂತಲಾ ಮೂಲಿಮನಿ, ಸದಸ್ಯರು, ಜಿಲ್ಲಾ ಪಂಚಾಯತ, ಗದಗ ಇವರು ಮಾತನಾಡಿ ಪಾರಂಪರಿಕ ಕೃಷಿ ಪದ್ದತಿಯಿಂದ ಮಾತ್ರ ಮಣ್ಣಿನ ಆರೈಕೆ ಸಾಧ್ಯ. ಈ ನಿಟ್ಟಿನಲ್ಲಿ ನಮ್ಮ ಪೂರ್ವಜ ರೈತರು ಅನುಸರಿಸಿದ್ದ ಪದ್ಧತಿಗಳನ್ನು ಪುನಃ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹಾಗೂ ವಿಶೇಷ ಉಪನ್ಯಾಸಕರಾಗಿ ಡಾ॥ ಪಿ.ಎಲ್.ಪಾಟೀಲ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಮಣ್ಣು ವಿಜ್ಞಾನ ವಿಭಾಗ, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ ಇವರು ಆಗಮಿಸಿದ್ದರು. ಮಣ್ಣಿನ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಭೌತಿಕ ಹಾಗೂ ಜೈವಿಕ ವಿಧಾನಗಳ ಬಗ್ಗೆ ರೈತರಿಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ಮೋಹನ ದುರಗಣ್ಣವರ, ಸದಸ್ಯರು, ತಾಲೂಕ ಪಂಚಾಯತ, ಗದಗ, ಶ್ರೀಮತಿ ಮಲ್ಲವ್ವ ಯಲಿಶೆಟ್ಟರ, ಉಪಾಧ್ಯಕ್ಷರು, ಗ್ರಾಮ ಪಂಚಾಯತ, ಹುಲಕೋಟಿ ಇವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ 585 ಜನ ರೈತರಿಗೆ ಮಣ್ಣು ಆರೋಗ್ಯ ಚೀಟಿಯನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ 800 ಕ್ಕೂ ಹೆಚ್ಚು ಜನ ರೈತರು, ರೈತ ಮಹಿಳೆಯರು ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

# ವಿವಿಧ ಬೆಳೆಗಳಲ್ಲಿ ಏರ್ಪಡಿಸಿದ ಕ್ಷೇತ್ರೋತ್ಸವಗಳು

- **ಹುಲ್ಲು ಹಾಗೂ ಮೇವಿನ ಬೆಳೆಗಳ ಕ್ಷೇತ್ರೋತ್ಸವ :** ದಿನಾಂಕ 16-10-2017 ರಂದು ಹಿರೇಹಂದಿಗೋಳ



ಗ್ರಾಮದ ಶ್ರೀ ವೀರನಗೌಡ ಜಕ್ಕನಗೌಡ್ರ ಇವರ ಹೊಲದಲ್ಲಿ ಹುಲ್ಲು ಹಾಗೂ ಮೇವಿನ ಬೆಳೆಗಳ ಕ್ಷೇತ್ರೋತ್ಸವವನ್ನು ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಇವರು ಏರ್ಪಡಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಡಾ॥ ಎಸ್.ಎಸ್.ಪಾಟೀಲ, ಉಪ ನಿರ್ದೇಶಕರು, ಪಶು ಸಂಗೋಪನೆ ಹಾಗೂ ವೈದ್ಯಕೀಯ ಸೇವಾ ಇಲಾಖೆ, ಗದಗ ಇವರು ಮಾತನಾಡಿ, ಹೈನು ದನಗಳಿಗೆ ಸಮತೋಲನ ಆಹಾರದ ಪೂರೈಕೆಯಿಂದ ಹಾಲಿನ ಉತ್ಪಾದಕತೆ ಹೆಚ್ಚು ಮಾಡಬಹುದಲ್ಲದೇ, ಹಿಂಡುವ ದನಗಳ ಎರಡು ಕರಗಳ ನಡುವಿನ ಅಂತರವನ್ನು ಕಡಿಮೆ ಮಾಡಬಹುದೆಂದು ತಿಳಿಸಿದರು. ಈ ನಿಟ್ಟಿನಲ್ಲಿ ಹೈನುಗಾರಿಕೆಯಲ್ಲಿ ತೊಡಗಿದ ರೈತರು ಸುಧಾರಿತ ಹುಲ್ಲು ಹಾಗೂ ಮೇವಿನ ಬೆಳೆಗಳನ್ನು ಬೆಳೆಯಲು ಸಲಹೆ ನೀಡಿದರು. ಮುಂದುವರೆದು ಮಾತನಾಡಿದ ಅವರು ಕಡಿಮೆ ಖರ್ಚಿನಲ್ಲಿ ಅಜೋಲ್ಲಾವನ್ನು ಬೆಳೆದು ದನಗಳಿಗೆ ಕೊಡಲು ತಿಳಿಸಿದರು. ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆ ಅಡಿಯಲ್ಲಿ ಕೈಗೊಂಡ ಸುಧಾರಿತ ಹುಲ್ಲಿನ ತಳಿಗಳಾದ ಹೈಬ್ರಿಡ್ ನೇಪಿಯರ್, ಡಿ.ಎಚ್.ಎನ್-8, ಗ್ರೇಜಿಂಗ ಗಿನಿ, ರೋಡ್ಸ್ ಹುಲ್ಲು, ಸಿಗ್ನಲ್ ಹುಲ್ಲು ಹಾಗೂ ಮೇವಿನ ಬೆಳೆಗಳಾದ ಜೋಳದ ಮೇವಿನ ಬೆಳೆ ಹಾಗೂ ಕುದುರೆ ಮೆಂತೆ ಪ್ರಾತ್ಯಕ್ಷಿಕೆ ತಾಕುಗಳಿಗೆ ರೈತರ ಭೆಟ್ಟಿಯನ್ನು ಏರ್ಪಡಿಸಲಾಗಿತ್ತು.

- **ಸಿರಿಧಾನ್ಯ ಬೆಳೆಗಳ ಕ್ಷೇತ್ರೋತ್ಸವ :** ದಿನಾಂಕ 25-10-2017 ರಂದು ಹುಲಕೋಟಿ ಗ್ರಾಮದ ಶ್ರೀ ನಾಗಪ್ಪ



ಹಳ್ಳಿ ಇವರ ಹೊಲದಲ್ಲಿ ಸಿರಿಧಾನ್ಯ ಬೆಳೆಗಳ ಕ್ಷೇತ್ರೋತ್ಸವವನ್ನು ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಏರ್ಪಡಿಸಲಾಗಿತ್ತು. 2017-18 ನೇ ಸಾಲಿನ ಸಿರಿಧಾನ್ಯಗಳ ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯಡಿ ಹಮ್ಮಿಕೊಂಡ ಈ ಕಾರ್ಯಕ್ರಮದಲ್ಲಿ ಶ್ರೀ ಚನ್ನಪ್ಪ ಬೂದಿಹಾಳ, ಅಧ್ಯಕ್ಷರು, ಸಾವಯವ ಕೃಷಿಕರ ಪ್ರಾಂತೀಯ ಒಕ್ಕೂಟ, ಧಾರವಾಡ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹವಾಮಾನ ವೈಪರೀತ್ಯದಿಂದ ಉಂಟಾಗಿರುವ ಬಿಕ್ಕಟ್ಟಿಗೆ ಸಿರಿಧಾನ್ಯಗಳ ಕೃಷಿಯೇ ಪರಿಹಾರವೆಂದು ಅಭಿಪ್ರಾಯಪಟ್ಟರು. ಮುಂಗಾರು ಹಂಗಾಮಿನ ತೀವ್ರ ಬರದ ಮಧ್ಯದಲ್ಲಿಯೂ ಸಿರಿಧಾನ್ಯಗಳು ಸಮೃದ್ಧವಾಗಿ ಬೆಳೆದಿದ್ದು, ಸಿರಿಧಾನ್ಯಗಳು ರೈತರಿಗೆ ಬರ ಸಹಿಷ್ಣುತೆಯ ಪಾಠ ಕಲಿಸುವಂತಿವೆ ಎಂದು ಹೇಳಿದರು. ಸುಸ್ಥಿರ ಕೃಷಿ ಉತ್ಪಾದಕತೆ ಜೊತೆಗೆ ಸಿರಿಧಾನ್ಯಗಳು ಅಧಿಕ ಪ್ರಮಾಣದ ನಾರಿನಾಂಶ ಹಾಗೂ ಕಬ್ಬಿಣಾಂಶ ಹಾಗೂ ಇತರೆ ಖನಿಜಗಳನ್ನು ಹೊಂದಿದ್ದು, ಇವುಗಳ ಸೇವನೆಯಿಂದ ಸದೃಢವಾದ ಆರೋಗ್ಯ ಹೊಂದಿ, ರೋಗ ಮುಕ್ತ ಜೀವನ ನಡೆಸಬಹುದಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಹುಲಕೋಟಿಯ ಪ್ರಗತಿಪರ ರೈತರಾದ ಶ್ರೀ ಜಿ.ಆರ್.ಓದುಗೌಡರ ಮಾತನಾಡಿ, ಸಿರಿಧಾನ್ಯಗಳನ್ನು ದಿನನಿತ್ಯದ ಆಹಾರದಲ್ಲಿ ಬಳಸಲು ಎಲ್ಲರೂ ಮುಂದಾಗಬೇಕೆಂದು ತಿಳಿಸಿದರು. ಕೆವಿಕೆ ಬೇಸಾಯ ತಜ್ಞರಾದ ಶ್ರೀ ವಿ.ಡಿ.ವೈಕುಂಠೆ ಮಾತನಾಡಿ ಸಿರಿಧಾನ್ಯಗಳಾದ ನವಣೆ, ಸಾಮೆ, ಹಾರಕ ಹಾಗೂ ಕೊರಲೆ ಬೆಳೆಗಳ ಪ್ರಾತ್ಯಕ್ಷಿಕೆಗಳನ್ನು ಜಿಲ್ಲೆಯ ದತ್ತು ಗ್ರಾಮಗಳಲ್ಲಿ ಕೆವಿಕೆಯಿಂದ ಏರ್ಪಡಿಸಲಾಗಿದೆ ಎಂದು ಹೇಳಿದರು. ಕೃಷಿ ಇಲಾಖೆಯಲ್ಲಿರುವ ಅಧಿಕಾರಿಗಳಾದ ಶ್ರೀ ನಾಗನೂರು ಇವರು ಸಿರಿಧಾನ್ಯಗಳನ್ನು ಪ್ರೋತ್ಸಾಹಿಸಲು ಕೃಷಿ ಇಲಾಖೆ ಯೋಜನೆಗಳ ಬಗ್ಗೆ ತಿಳಿಸಿದರು. ಗೃಹ ವಿಜ್ಞಾನ ತಜ್ಞರಾದ ಡಾ॥ ಸುಧಾ ಮಂಕಣಿ ಅವರು ಸಿರಿಧಾನ್ಯಗಳಿಂದ ತಯಾರಿಸಬಹುದಾದ ಮೌಲ್ಯವರ್ಧಿತ ಆಹಾರಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಸಿರಿಧಾನ್ಯಗಳಿಂದ ತಯಾರಿಸಲ್ಪಟ್ಟ ಆಹಾರ ಪದಾರ್ಥಗಳ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರಗತಿಪರ ರೈತರಾದ ಶ್ರೀಯುತ ವಿ.ಜಿ.ಹಿರೇಗೌಡರ, ಸಿದ್ದಪ್ಪ ಕರಿಕಟ್ಟಿ ಹಾಗೂ ಅಶೋಕ ಹಳ್ಳಿ ಅವರು ಸಿರಿಧಾನ್ಯಗಳ ಕೃಷಿ ಹಾಗೂ ಬಳಕೆ ಕುರಿತು ತಮ್ಮ ಅನುಭವ

ಹಂಚಿಕೊಂಡರು. ಕಾರ್ಯಕ್ರಮದಲ್ಲಿ 160 ಕ್ಕೂ ಹೆಚ್ಚು ಜನ ರೈತರು ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.

- **ಹಬ್ಬು ಶೇಂಗಾ ಬೆಳೆಯ ಕ್ಷೇತ್ರೋತ್ಸವ** : 2017-18 ನೇ ಸಾಲಿನ ಮುಂಗಾರು ಹಂಗಾಮಿನ ರಾಷ್ಟ್ರೀಯ



ಎಣ್ಣೆಕಾಳು ಅಭಿಯಾನ ಗೊಂಚಲು ಗ್ರಾಮ ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯ ಅಡಿಯಲ್ಲಿ ದಿನಾಂಕ 26-10-2017 ರಂದು ಹಬ್ಬು ಶೇಂಗಾ ಬೆಳೆಯಲ್ಲಿ ಕ್ಷೇತ್ರೋತ್ಸವವನ್ನು ಗದಗ ತಾಲೂಕಿನ ಮಹಾಲಿಂಗಪೂರ ಗ್ರಾಮದ ಶ್ರೀ ವಾಸಪ್ಪ ಲಮಾಣಿ ಇವರ ಹೊಲದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಗತಿಪರ ರೈತರಾದ ಶ್ರೀ ರತ್ನಪ್ಪ ನಾಯಕ ಇವರು ವಹಿಸಿದ್ದರು. ಬೇಸಾಯ ಶಾಸ್ತ್ರ ತಜ್ಞರಾದ ಶ್ರೀ ವಿ.ಡಿ.ವೈಕುಂಠೆ ಇವರು ಹಬ್ಬು ಶೇಂಗಾ ಬೆಳೆಯಲ್ಲಿ ಅಳವಡಿಸಿದ ತಂತ್ರಜ್ಞಾನಗಳ ಕುರಿತು ತಿಳಿಸಿದರು. ಕೀಟಶಾಸ್ತ್ರ ತಜ್ಞರಾದ ಶ್ರೀ ಎಸ್.ಕೆ.ಮುದ್ಲಾಪೂರ ಇವರು ಸಂಧಿಗ್ದ ಹಂತದಲ್ಲಿ ಹಬ್ಬು ಶೇಂಗಾ ಬೆಳೆಗೆ ಬಾಧಿಸುವ ಕೀಟ ಹಾಗೂ ರೋಗ ಕುರಿತು ತಿಳಿಸಿದರು. ಮಣ್ಣು ಶಾಸ್ತ್ರ ತಜ್ಞರಾದ ಶ್ರೀ ಎನ್.ಎಚ್.ಭಂಡಿಯವರು ಹಬ್ಬು ಶೇಂಗಾ ಬೆಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ಮಾಹಿತಿ ನೀಡಿದರು.

- **ಶೇಂಗಾ ಹಾಗೂ ಈರುಳ್ಳಿ ಬೆಳೆಗಳ ಕ್ಷೇತ್ರೋತ್ಸವ** : 2017-18 ನೇ ಸಾಲಿನ ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯ ಅಡಿಯಲ್ಲಿ ದಿನಾಂಕ 01-11-2017 ರಂದು ಶ್ರೀ ಬಸವರಡ್ಡೆಪ್ಪ ರಡ್ಡೇರ ಸಾ॥ ಕೊಚಲಾಪೂರ



ತಾ॥ ರೋಣ ಇವರ ಹೊಲದಲ್ಲಿ ಶೇಂಗಾ ಹಾಗೂ ಈರುಳ್ಳಿ ಬೆಳೆಗಳ ಕ್ಷೇತ್ರೋತ್ಸವ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ಶ್ರೀ ರಾಚನಗೌಡ ಅಯ್ಯನಗೌಡರ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ರೈತರ ಮುಖಂಡರಾದ ಶ್ರೀ ಶಿವನಗೌಡ ಅಯ್ಯನಗೌಡರ ಭಾಗವಹಿಸಿ, ರೈತರು ಕೃಷಿಯಲ್ಲಿ ಹೊಸ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿ ಬೆಳೆಯ ಇಳುವರಿಯನ್ನು ಹೆಚ್ಚಿಸಬೇಕೆಂದು ತಿಳಿಸಿದರು. ಕೇಂದ್ರದ ಬೇಸಾಯ ಶಾಸ್ತ್ರ ತಜ್ಞರಾದ ಶ್ರೀ ವಿ.ಡಿ.ವೈಕುಂಠೆ ಇವರು ಶೇಂಗಾ ಬೆಳೆಯ ಕೆ.ಡಿ.ಜಿ-123 ತಳಿಯಲ್ಲಿ ಅಳವಡಿಸಿದ ತಂತ್ರಜ್ಞಾನಗಳು ಮತ್ತು ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಮಹತ್ವ ತಿಳಿಸಿದರು. ತೋಟಗಾರಿಕೆ ತಜ್ಞರಾದ ಶ್ರೀ ಕೆ.ಟಿ.ಪಾಟೀಲ ಇವರು ಅರ್ಕಾ ಕಲ್ಯಾಣ ಈರುಳ್ಳಿ ಬೆಳೆಯ ಗುಣಗಳು ಮತ್ತು ಪೋಷಕಾಂಶಗಳ ನಿರ್ವಹಣೆ ಕುರಿತು ತಿಳಿಸಿದರು. ಕೀಟಶಾಸ್ತ್ರ ತಜ್ಞರಾದ ಶ್ರೀ ಎಸ್.ಕೆ.ಮುದ್ಲಾಪೂರ ಭಾಗವಹಿಸಿ ಶೇಂಗಾ ಹಾಗೂ ಈರುಳ್ಳಿ ಬೆಳೆಯಲ್ಲಿ ಬರುವ ಕೀಟಗಳು, ರೋಗಗಳು ಹಾಗೂ ಅವುಗಳ ನಿರ್ವಹಣೆಯಲ್ಲಿ ಅಳವಡಿಸಬೇಕಾದ ತಂತ್ರಜ್ಞಾನಗಳ ಕುರಿತು ತಿಳಿಸಿದರು. ಪ್ರಗತಿಪರ ರೈತರಾದ ಶ್ರೀ ಅಬುಸಲಿಂ ರೆವಡೂರ ಮತ್ತು ಶ್ರೀ ಅಂದಾನಯ್ಯ ಮಾಲಗಿತ್ತಿಮಠ ಇವರು ಕ್ಷೇತ್ರೋತ್ಸವ ಕುರಿತು ತಮ್ಮ ಅನಿಸಿಕೆಗಳನ್ನು ರೈತರೊಂದಿಗೆ ಹಂಚಿಕೊಂಡರು.

- **ಸೂರ್ಯಕಾಂತಿ ಬೆಳೆಯ ಕ್ಷೇತ್ರೋತ್ಸವ** : 2017-18 ನೇ ಸಾಲಿನ ಮುಂಗಾರು ಹಂಗಾಮಿನ ರಾಷ್ಟ್ರೀಯ



ಎಣ್ಣೆಕಾಳು ಅಭಿಯಾನ ಗೊಂಚಲು ಗ್ರಾಮ ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯ ಅಡಿಯಲ್ಲಿ ದಿನಾಂಕ 06-11-2017 ರಂದು ಸೂರ್ಯಕಾಂತಿ ಬೆಳೆಯಲ್ಲಿ ಕ್ಷೇತ್ರೋತ್ಸವವನ್ನು ರೋಣ ತಾಲೂಕಿನ ಕೊಚಲಾಪೂರ ಗ್ರಾಮದ ಶ್ರೀ ರೇಣಕನಗೌಡ ಗದಿಗೆಪ್ಪಗೌಡ್ರ ಇವರ ಹೊಲದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ವಿರುಪಾಕ್ಷಯ್ಯ ವೀರಯ್ಯ ಮೇಟಿ ವಿಶ್ರಾಂತ ತೋಟಗಾರಿಕೆ ಇಲಾಖೆ ಅಧಿಕಾರಿಗಳು ವಹಿಸಿದ್ದರು. ಅತಿಥಿಗಳಾಗಿ ಶ್ರೀಮತಿ ಸಾವಿತ್ರಿ ಶಿವನಗೌಡರ, ಕೃಷಿ ಅಧಿಕಾರಿಗಳು, ರೈತ ಸಂಪರ್ಕ ಕೇಂದ್ರ, ನರೇಗಲ್ ಇವರು ಭಾಗವಹಿಸಿ ಮಾತನಾಡಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿದ ಹೊಸ ತಂತ್ರಜ್ಞಾನಗಳನ್ನು ಬೆಳೆಯಲ್ಲಿ ಅಳವಡಿಸಿಕೊಂಡು ಇಳುವರಿಯನ್ನು ಹೆಚ್ಚಿಸಬೇಕೆಂದು ತಿಳಿಸಿದರು. ಬೇಸಾಯ ಶಾಸ್ತ್ರ ತಜ್ಞರಾದ ಶ್ರೀ ವಿ.ಡಿ.ವೈಕುಂಠೆ ಇವರು ಕ್ಷೇತ್ರೋತ್ಸವದ ಮಹತ್ವ ಮತ್ತು ಸೂರ್ಯಕಾಂತಿ ಬೆಳೆಯಲ್ಲಿ ಅಳವಡಿಸಿದ ತಂತ್ರಜ್ಞಾನಗಳ ಕುರಿತು ಮಾಹಿತಿ ನೀಡಿದರು.

ಕೀಟಶಾಸ್ತ್ರ ತಜ್ಞರಾದ ಶ್ರೀ ಎಸ್.ಕೆ.ಮುದ್ಲಾಪೂರ ಇವರು ಸೂರ್ಯಕಾಂತಿ ಬೆಳೆಯಲ್ಲಿ ಬರುವ ಕೀಟಗಳು ಮತ್ತು ರೋಗಗಳ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಕೊಚಲಾಪೂರ ಹಾಗೂ ಸುತ್ತಮುತ್ತಲಿನ ಗ್ರಾಮದ ೮೦ ಕ್ಕೂ ಹೆಚ್ಚು ಜನ ರೈತರು ಭಾಗವಹಿಸಿದ್ದರು.

- **ಮೆಣಸಿನಕಾಯಿ ಬೆಳೆಯ ಕ್ಷೇತ್ರೋತ್ಸವ :** ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಹಾಗೂ ಸಿಂಜೆಂಟಾ ಕಂಪನಿ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 28-11-2017 ರಂದು ಕುರ್ತಕೋಟಿ ಗ್ರಾಮದ ವೀರಪ್ಪ ಗಾಣಿಗೇರ ಇವರ ಹೊಲದಲ್ಲಿ 'ಮೆಣಸಿನಕಾಯಿ ಬೆಳೆಯ ಕ್ಷೇತ್ರೋತ್ಸವವನ್ನು ಏರ್ಪಡಿಸಲಾಗಿತ್ತು. ಕ್ಷೇತ್ರೋತ್ಸವ ಉದ್ಘಾಟಿಸಿ ಮಾತನಾಡಿದ ಶ್ರೀ ಅಪ್ಪಣ್ಣ ಇನಾಮತಿ ಪ್ರಗತಿಪರ ರೈತರು ಹಾಗೂ ಸದಸ್ಯರು, ಗ್ರಾಮ ಪಂಚಾಯತ, ಕುರ್ತಕೋಟಿ ಇವರು ಮಾತನಾಡಿ ಹವಾಮಾನ ವೈಪರೀತ್ಯದಿಂದ ಮೆಣಸಿನಕಾಯಿ ಬೆಳೆಯ ಉತ್ಪಾದಕತೆ ಹಾಗೂ ಗುಣಮಟ್ಟ ಕುಸಿಯುತ್ತಿದ್ದು ರೈತರು ಸಾವಯವ ಕೃಷಿ ಪರಿಕರಗಳನ್ನು ಬಳಸಿ ಸಾವಯವ ಕೃಷಿಯತ್ತ ಗಮನ ಹರಿಸಬೇಕೆಂದು ತಿಳಿಸಿದರು. ಕೆವಿಕೆಯ ತೋಟಗಾರಿಕೆ ತಜ್ಞರಾದ ಶ್ರೀ ಕೆ.ಟಿ.ಪಾಟೀಲ ಇವರು ಮಾತನಾಡಿ ಮೆಣಸಿನಕಾಯಿ ಬೆಳೆಯಲ್ಲಿ 10 ಎಕರೆ ಕ್ಷೇತ್ರದಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು ಹಾಗೂ ಮೆಣಸಿನಕಾಯಿ ಉತ್ಪಾದನಾ ತಾಂತ್ರಿಕತೆಗಳ ಬಗ್ಗೆ ಮಾತನಾಡಿದರು. ಸಸ್ಯ ಸಂರಕ್ಷಣೆ ತಜ್ಞರಾದ ಶ್ರೀ ಎಸ್.ಕೆ.ಮುದ್ಲಾಪೂರ ಇವರು ಮೆಣಸಿನಕಾಯಿ ಬೆಳೆ ಬಾಧಿಸುವ ಕೀಟ ಹಾಗೂ ರೋಗದ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಶ್ರೀ ಶೈಲೇಂದ್ರ ಬಿರಾದಾರ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಗದಗ ಇವರು ತೋಟಗಾರಿಕೆ ಇಲಾಖೆಯ ಯೋಜನೆಗಳ ಬಗ್ಗೆ ವಿವರಗಳನ್ನು ನೀಡಿದರು. ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಿದ ಮೆಣಸಿನಕಾಯಿ ಬೆಳೆಗಾರರಾದ ಶ್ರೀಯುತರಾದ ಮಲ್ಲಪ್ಪ ನವಲಗುಂದ, ಜಿ.ಎಸ್.ಪಾಟೀಲ, ಪ್ರಮೋದ ಗಾಣಿಗೇರ, ಎಸ್.ಎಮ್.ಹಿರೇಮಠ ಇವರು ತಮ್ಮ ಅನುಭವವನ್ನು ಇತರ ರೈತರೊಂದಿಗೆ ಹಂಚಿಕೊಂಡರು. ಸಿಂಜೆಂಟಾ ಕಂಪನಿಯ ಅಧಿಕಾರಿಗಳಾದ ಶ್ರೀ ಶಿವಾನಂದ ಹಿರೇಮಠ ಇವರು ಮೆಣಸಿನಕಾಯಿ ಹೈಬ್ರಿಡ್ ತಳಿಗಳ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 150 ಕ್ಕೂ ಹೆಚ್ಚು ಜನ ರೈತರು ಭಾಗವಹಿಸಿದ್ದರು.



- **ಸೂರ್ಯಕಾಂತಿ ಬೆಳೆಯ ಕ್ಷೇತ್ರೋತ್ಸವ :** 2017-18 ನೇ ಸಾಲಿನ ಮುಂಗಾರು ಹಂಗಾಮಿನ ರಾಷ್ಟ್ರೀಯ ಎಣ್ಣೆಕಾಳು ಅಭಿಯಾನ ಗೊಂಚಲು ಗ್ರಾಮ ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯ ಅಡಿಯಲ್ಲಿ ದಿನಾಂಕ 22-11-2017 ರಂದು ಮುಂಡರಗಿ ತಾಲೂಕಿನ ಎಕಲಾಸಪೂರ ಗ್ರಾಮದ ಶ್ರೀ ವೀರಭದ್ರಪ್ಪ ರೋಣದ ಇವರ ಹೊಲದಲ್ಲಿ ಸೂರ್ಯಕಾಂತಿ ಬೆಳೆಯ ಕ್ಷೇತ್ರೋತ್ಸವವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಬೇಸಾಯ ಶಾಸ್ತ್ರ ತಜ್ಞರಾದ ಶ್ರೀ ವಿ.ಡಿ.ವೈಕುಂಠೆ ಇವರು ಮುಂಚೂಣಿ ಪ್ರಾತ್ಯಕ್ಷಿತೆಯಲ್ಲಿ ಅಳವಡಿಸಿದ ತಂತ್ರಜ್ಞಾನಗಳು ಮತ್ತು ಸೂರ್ಯಕಾಂತಿ ಬೆಳೆಯ ಸಮಗ್ರ ಪೋಷಕಾಂಶಗಳ ನಿರ್ವಹಣೆ ಕುರಿತು ತಿಳಿಸಿದರು. ಕೀಟಶಾಸ್ತ್ರ ತಜ್ಞರಾದ ಶ್ರೀ ಎಸ್.ಕೆ.ಮುದ್ಲಾಪೂರ ಇವರು ಸೂರ್ಯಕಾಂತಿ ಬೆಳೆಯಲ್ಲಿ ಬರುವ ಕೀಟಗಳು ಮತ್ತು ರೋಗಗಳ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ತೋಟಗಾರಿಕೆ ತಜ್ಞರಾದ ಶ್ರೀ ಕೆ.ಟಿ.ಪಾಟೀಲ ಭಾಗವಹಿಸಿ ಕ್ಷೇತ್ರೋತ್ಸವದ ಮಹತ್ವದ ಬಗ್ಗೆ ತಿಳಿಸುತ್ತಾ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಲಾಭ ಪಡೆಯಬೇಕೆಂದರು. ಎಕಲಾಸಪೂರ ಗ್ರಾಮದ ಪ್ರಗತಿಪರ ರೈತರಾದ ಶ್ರೀಯುತ ಶಿವನಾಗಪ್ಪ ರೋಣದ, ಮಲ್ಲಪ್ಪ ಕೋವಿ ಮತ್ತು ಗ್ರಾಮದ 100 ಕ್ಕೂ ಹೆಚ್ಚಿನ ಜನ ರೈತರು ಕ್ಷೇತ್ರೋತ್ಸವದಲ್ಲಿ ಭಾಗವಹಿಸಿದ್ದರು.



## ಮಹಿಳಾ ಕೃಷಿಕರ ದಿನಾಚರಣೆ

ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಹಾಗೂ ಮಹಿಳಾ ಮಂಡಳ



ಬಿಂಕದಕಟ್ಟಿ ಇವರ ಸಂಯುಕ್ತ ಆಶ್ರಯದಲ್ಲಿ "ಮಹಿಳಾ ಕೃಷಿಕರ ದಿನಾಚರಣೆ" ಕಾರ್ಯಕ್ರಮವನ್ನು ದಿನಾಂಕ 15-10-2017 ರಂದು ಬಿಂಕದಕಟ್ಟಿ ಗ್ರಾಮದ ಶ್ರೀ ರಾಮಕರುಣಾನಂದ ಸ್ವಾಮಿ ಮಠದಲ್ಲಿ ಶ್ರೀ ಮಲ್ಲಮ್ಮ ಅಮ್ಮನವರ ಸಾನಿಧ್ಯದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಶ್ರೀಮತಿ ಶೋಭಾ ಮೇಟಿ, ಸದಸ್ಯರು ಜಿಲ್ಲಾ ಪಂಚಾಯತ, ಗದಗ ಇವರು ಮಾತನಾಡಿ, ಮಹಿಳೆಯರು ಶೇಕಡಾ 90 ರಷ್ಟು ಕೃಷಿಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದು, ಅವರ ಸಾಧನೆಯನ್ನು ಗುರುತಿಸಿ ಕೃಷಿ ರಂಗದ ಮುಖ್ಯ ವಾಹಿನಿಗೆ ಅವರನ್ನು ತರುವ ಕೆಲಸ ಆಗಬೇಕೆಂದು ತಿಳಿಸಿದರು. ಭೂಮಿ ತಯಾರು ಮಾಡುವದರಿಂದ ಹಿಡಿದು, ಬಿತ್ತುವುದು, ಎಡೆ ಹೊಡೆಯುವುದು, ಕಳೆ ತೆಗೆಯುವದು, ರಸ ಗೊಬ್ಬರ ಕೊಡುವುದು, ಕೊಯ್ಲು ಮಾಡುವುದು, ಕಾಳುಗಳನ್ನು ಸ್ವಚ್ಛ ಮಾಡುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದು, ಈ ಚಟುವಟಿಕೆಗಳ ಸುಧಾರಿತ ತಂತ್ರಜ್ಞಾನಗಳನ್ನು ರೈತ ಮಹಿಳೆಯರಿಗೆ ತರಬೇತಿ ಮುಖಾಂತರ ತಲುಪಿಸುವ ಕಾರ್ಯ ತ್ವರಿತವಾಗಿ ಆಗಬೇಕಾಗಿದೆ ಎಂದು ಹೇಳಿದರು. ಮುಂದುವರೆದು ಮಾತನಾಡಿದ ಅವರು ಮಹಿಳೆಯರು ಕೃಷಿಯ ಜೊತೆಗೆ ಕೃಷಿ ಉಪಕಸುಬುಗಳನ್ನು ಮಾಡಿ ಕುಟುಂಬದ ಆದಾಯ ಹೆಚ್ಚಿಸಿಕೊಳ್ಳಲು ವಿನಂತಿಸಿದರು. ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ್ದ ಶ್ರೀಮತಿ ಶಕುಂತಲಾ ಮೂಲಿಮನಿ, ಸದಸ್ಯರು, ಜಿಲ್ಲಾ ಪಂಚಾಯತ್, ಗದಗ ಇವರು ಮಾತನಾಡಿ ಮಹಿಳೆಯರು ಆದಾಯ ತರುವಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಕಿರು ಉದ್ಯಮಗಳನ್ನು ಸ್ಥಾಪಿಸಬೇಕೆಂದು ತಿಳಿಸಿದರು. ಈ ನಿಟ್ಟಿನಲ್ಲಿ ಮಹಿಳೆಯರು ಕೃಷಿ ವಿಜ್ಞಾನ ಕೇಂದ್ರದ ಮಾರ್ಗದರ್ಶನ ಪಡೆಯಬೇಕೆಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಜಿಲ್ಲೆಯ ಪ್ರಗತಿಪರ ರೈತ ಮಹಿಳೆಯರಾದ ಶ್ರೀಮತಿ ವಿಜಯಲಕ್ಷ್ಮಿ ಹಿರೇಮಠ, ಲಚ್ಚಮ್ಮ ಅಗಸನಕೊಪ್ಪ, ಅನಸೂಯಾ ಇಟಗಿ, ಸೀತಮ್ಮ ಕರಿಯಪ್ಪನವರ, ಅನಸೂಯಾ ತಿರ್ಲಾಪೂರ, ಮೆಹರನುಬಿ ಸೊನ್ನೆಖಾನ್ ಹಾಗೂ ಅನುಸೂಯಾ ಮಕಾಳೆ ಇವರನ್ನು ಕೃಷಿಯಲ್ಲಿ ಮಾಡಿದ ಅವರ ಸಾಧನೆಯನ್ನು ಗುರುತಿಸಿ ಪ್ರಮಾಣ ಪತ್ರ ಹಾಗೂ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಜೋಳದಿಂದ ತಯಾರಿಸಿದ ವಿವಿಧ ಪದಾರ್ಥಗಳ ಸ್ಪರ್ಧೆ, ಕೃಷಿ ರಸಪ್ರಶ್ನೆ, ಚರ್ಚಾ ಸ್ಪರ್ಧೆ ಹಾಗೂ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಗತಿಪರ ರೈತ ಮಹಿಳೆ ಹಾಗೂ ಕೃಷಿ ಪ್ರಶಸ್ತಿ ವಿಜೇತೆ ಶ್ರೀಮತಿ ಸರೋಜಿನಿ ಅಗಸನಕೊಪ್ಪ ಹಾಗೂ ಜಯಶ್ರೀ ಹುಲ್ಲೋಜಿ, ಉಪಾಧ್ಯಕ್ಷರು, ಗ್ರಾಮ ಪಂಚಾಯತ, ಬಿಂಕದಕಟ್ಟಿ ಇವರು ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ 200 ಕ್ಕೂ ಹೆಚ್ಚು ಜನ ರೈತ ಮಹಿಳೆಯರು ಭಾಗವಹಿಸಿದ್ದರು.

## ವಿಶ್ವ ಆಹಾರ ದಿನಾಚರಣೆ

ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಇವರ ಆಶ್ರಯದಲ್ಲಿ ದಿನಾಂಕ



16-10-2017 ರಂದು ವಿಶ್ವ ಆಹಾರ ದಿನಾಚರಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ಎಮ್.ಜಿ.ಪಾಟೀಲ, ವಿಶ್ರಾಂತ ಉಪನ್ಯಾಸಕರು, ಸಹಕಾರ ತರಬೇತಿ ಸಂಸ್ಥೆ, ಧಾರವಾಡ ಇವರು ಮಾತನಾಡಿ ಗ್ರಾಮೀಣ ಯುವಕರು ಕೃಷಿಯಿಂದ ವಿಮುಖವಾಗಿ ಪಟ್ಟಣದ ಕಡೆ ವಲಸೆ ಹೋಗುತ್ತಿದ್ದು, ಮುಂದಿನ ದಿನಮಾನಗಳಲ್ಲಿ ಕೃಷಿ ಉತ್ಪಾದಕತೆ ಹಾಗೂ ಆಹಾರ ಭದ್ರತೆಗೆ ಬಲವಾದ ಪೆಟ್ಟು ಬೀಳಬಹುದು ಎಂದು ಹೇಳಿದರು. ಈ ನಿಟ್ಟಿನಲ್ಲಿ ಗ್ರಾಮೀಣ ಯುವಕರಿಗೆ ಕೃಷಿಯಲ್ಲಿ ಆಸಕ್ತಿ ಬರುವಂತಹ ಯೋಜನೆಗಳನ್ನು ರೂಪಿಸಬೇಕೆಂದು ತಿಳಿಸಿದರು. ಮುಂದುವರೆದು ಮಾತನಾಡಿದ ಅವರು

ಯುವಕರು ಪಟ್ಟಣದಿಂದ ಗ್ರಾಮಗಳಿಗೆ ಬರುವಂತೆ ವಾತಾವರಣ ನಿರ್ಮಿಸಿದರೆ ಮಾತ್ರ ಕೃಷಿಯಲ್ಲಿ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜೆ.ಡಿ.ಹೂಗಾರ, ಅಧ್ಯಕ್ಷರು, ನೀರು ಬಳಕೆದಾರರ ಸಹಕಾರ ಸಂಘ, ಚಿಕ್ಕಲಕಟ್ಟಿ, ರಾಮದುರ್ಗ ತಾಲೂಕು ಇವರು ವಹಿಸಿದ್ದರು. ಅತಿಥಿಗಳಾಗಿ ನೀರು ಬಳಕೆದಾರರ ಸಹಕಾರ ಸಂಘ ನಿರ್ದೇಶಕರಾದ ಶ್ರೀಯುತ ಗೌಡಪ್ಪ ಸತ್ತಿಗೇರಿ ಹಾಗೂ ವಿಲಾಸ ನಾಯಕ ಭಾಗವಹಿಸಿದ್ದರು.

## ಜೈ ಕಿಸಾನ್ ಜೈ ವಿಜ್ಞಾನ ಸಪ್ತಾಹ ಆಚರಣೆ – ಡಿಸೆಂಬರ 23 ರಿಂದ 29

### 1) ರೈತರ ದಿನಾಚರಣೆ

i) ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಹಾಗೂ ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಗದಗ ಇವರ ಸಹಯೋಗದಲ್ಲಿ ದಿನಾಂಕ 23-12-2017 ರಂದು "ರೈತ ದಿನಾಚರಣೆ ಹಾಗೂ ಕೃಷಿ ತಂತ್ರಜ್ಞಾನ ಸಪ್ತಾಹ (ಜೈ ಕಿಸಾನ್ ಜೈ ವಿಜ್ಞಾನ)" ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಮಾರಂಭವನ್ನು ಉದ್ಘಾಟಿಸಿದ ಡಾ॥ಬಿ.ಬಿ.ಚನ್ನಪ್ಪಗೌಡರ, ಸಹ ವಿಸ್ತರಣಾ ನಿರ್ದೇಶಕರು, ಪ್ರಾದೇಶಿಕ ಸಂಶೋಧನಾ ಕೇಂದ್ರ, ವಿಜಯಪುರ ಇವರು ಮಾತನಾಡಿ, ಭಾರತದ ಪ್ರಧಾನ ಮಂತ್ರಿಗಳು ಹಾಗೂ ರೈತರ ಮುಖಂಡರಾಗಿದ್ದ ಚೌಧರಿ ಚರಣಸಿಂಗ ಅವರ ಜನ್ಮ ದಿನವನ್ನು ರೈತ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದ್ದು, ರೈತರ ಸ್ಥಿತಿ ಸುಧಾರಣೆಯಲ್ಲಿ ಅವರ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು. ಈ ನಿಟ್ಟಿನಲ್ಲಿ ರೈತರು ನೆಲ-ಜಲ ಸಂರಕ್ಷಣೆ ಹಾಗೂ ನಿರ್ವಹಣೆ, ಸಮಗ್ರ ಕೃಷಿ ಹಾಗೂ ಸಾವಯವ ಕೃಷಿ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡರೆ ರೈತ ದಿನಾಚರಣೆಗೆ ಮಹತ್ವ ಬರುತ್ತದೆ ಎಂದು ಹೇಳಿದರು. ಈ ನಿಟ್ಟಿನಲ್ಲಿ ರೈತರು ಕೃಷಿ ವಿಜ್ಞಾನಿಗಳೊಡನೆ ನಿರಂತರ ಸಂಪರ್ಕದಲ್ಲಿ ಇರಬೇಕೆಂದು ತಿಳಿಸಿದರು.



ಡಾ॥ ಎಸ್.ಎಸ್.ಪಾಟೀಲ, ಉಪ ನಿರ್ದೇಶಕರು, ಪಶು ಸಂಗೋಪನೆ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆ, ಗದಗ ಇವರು ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ ಕೃಷಿಗೆ ಪೂರಕ ಉದ್ಯಮಗಳಾದ ಪಶು ಸಂಗೋಪನೆ ಚಟುವಟಿಕೆಗಳನ್ನು ರೈತರು ಅನುಸರಿಸಬೇಕೆಂದು ತಿಳಿಸಿದರು. ಶ್ರೀ ಅಮರನಾಥ, ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಗದಗ ಇವರು ರೇಷ್ಮೆ ಇಲಾಖೆಗಳ ಯೋಜನೆ ಬಗ್ಗೆ ರೈತರಿಗೆ ಮಾಹಿತಿ ಒದಗಿಸಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ್ದ ಶ್ರೀ ಜಿ.ಆರ್.ಓದುಗೌಡರ, ಪ್ರಗತಿಪರ ರೈತರು ಹಾಗೂ ಅಧ್ಯಕ್ಷರು, ಮಾವು ಬೆಳೆಗಾರರ ಸಂಘ ಇವರು ಮಾತನಾಡಿ ಪ್ರಚಲಿತ ವಿದ್ಯಮಾನಗಳಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳಿಗೆ ರೈತರು ರೈತರ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಬೇಕೆಂದು ತಿಳಿಸಿದರು. ಶ್ರೀ ರಾಜಶೇಖರ ಮೇಟಿ, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಗದಗ ಇವರು ಕೃಷಿ ಇಲಾಖೆಯ ಯೋಜನೆಗಳ ಕುರಿತು ರೈತರಿಗೆ ಮಾಹಿತಿ ಒದಗಿಸಿದರು. ಕೃಷಿಕ ಸಮಾಜದ ಸದಸ್ಯೆಯರಾದ ಶ್ರೀಮತಿ ಶಕುಂತಲಾ ಕೊಂಡಾಬಿಂಗಿ ಇವರು ಮಾತನಾಡಿದರು. ಈ ಸಂದರ್ಭದಲ್ಲಿ ಪ್ರಗತಿಪರ ರೈತರಾದ ಶ್ಯಾಗೋಟಿ ಗ್ರಾಮದ ಶ್ರೀ ಮಹಾದೇವಗೌಡ ನೀಲಪ್ಪಗೌಡರ ಹಾಗೂ ಕುರ್ತಕೋಟಿ ಗ್ರಾಮದ ಶ್ರೀ ಶರಣಯ್ಯ ಹಿರೇಮಠ ಇವರನ್ನು ಸನ್ಮಾನಿಸಲಾಯಿತು. ಸನ್ಮಾನಿತರು ಕೃಷಿಯಲ್ಲಿಯ ತಮ್ಮ ಅನುಭವವನ್ನು ಹಂಚಿಕೊಂಡರು.

ಪ್ರಾರಂಭದಲ್ಲಿ ಕೆವಿಕೆ ಮುಖ್ಯಸ್ಥರಾದ ಡಾ॥ ಎಲ್.ಜಿ.ಹಿರೇಗೌಡರ ಅವರು ಅತಿಥಿಗಳನ್ನು ಸ್ವಾಗತಿಸಿ, ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಕೃಷಿ ತಂತ್ರಜ್ಞಾನ ಸಪ್ತಾಹ ಆಚರಿಸಲಾಗುತ್ತಿದ್ದು, ಡಿಸೆಂಬರ 23-29 ರವರೆಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 300 ಕ್ಕೂ ಹೆಚ್ಚು ಜನ ರೈತರು, ರೈತ ಮಹಿಳೆಯರು ಹಾಗೂ ವಿಸ್ತರಣಾ ಸಿಬ್ಬಂದಿ ಭಾಗವಹಿಸಿದ್ದರು.

ii) ದಿನಾಂಕ 23-12-2017 ರಂದು ಕೃಷಿ ಇಲಾಖೆ, ಶಿರಹಟ್ಟಿ ಇವರು ಆಯೋಜಿಸಿದ್ದ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ಕೇಂದ್ರದ ತಜ್ಞರಾದ ಶ್ರೀ ಎನ್.ಎಚ್.ಭಂಡಿ ಅವರು ಅತಿಥಿಗಳಾಗಿ ಭಾಗವಹಿಸಿದ್ದರು. ಮಣ್ಣಿನ ಫಲವತ್ತತೆ ಮತ್ತು ಮಣ್ಣು ಪರೀಕ್ಷೆಯ ಮಹತ್ವ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ 180 ಜನ ರೈತರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶಿರಹಟ್ಟಿ ತಾಲೂಕಿನ ಬೆಳ್ಳಟ್ಟಿ ಗ್ರಾಮದಲ್ಲಿ ಆಯೋಜಿಸಲಾಗಿತ್ತು.

2) **ರೈತರ ತರಬೇತಿ ಮತ್ತು ಭೆಟ್ಟಿ**: ದಿನಾಂಕ 24-12-2017 ರಂದು, ನಿಕ್ರಾ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಗದಗ ತಾಲೂಕಿನ ಮಹಾಲಿಂಗಪೂರ ಗ್ರಾಮದ 27 ಜನ ರೈತರಿಗೆ ತೋಟಗಾರಿಕೆ ವಿಶ್ವ ವಿದ್ಯಾಲಯದಲ್ಲಿ ಏರ್ಪಡಿಸಿದ ತೋಟಗಾರಿಕೆ ಮೇಳಕ್ಕೆ ವಿಸ್ತರಣಾ ಭೆಟ್ಟಿಯನ್ನು ಏರ್ಪಡಿಸಲಾಯಿತು. ವಿವಿಧ ಪ್ರಾತ್ಯಕ್ಷಿಕೆ ತಾಕುಗಳಿಗೆ, ವಿವಿಧ ಬೆಳೆಗಳ ತೋಟಗಳಿಗೆ, ಕೃಷಿ ಯಂತ್ರೋಪಕರಣಗಳು, ಮೌಲ್ಯವರ್ಧನೆ, ಹೂವಿನ ಬೇಸಾಯ, ತರಕಾರಿ ಬೇಸಾಯ, ಹಸಿರು ಮನೆ ಇತ್ಯಾದಿಗಳಿಗೆ ರೈತರು ಭೆಟ್ಟಿ ನೀಡಿದರು. ಜೊತೆಗೆ ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆಯ ವಿವಿಧ ಪ್ರಾತ್ಯಕ್ಷಿಕೆ ಘಟಕಗಳಿಗೆ ಭೆಟ್ಟಿಯನ್ನು ಏರ್ಪಡಿಸಲಾಯಿತು.

3) **ತೊಗರಿ ಬೆಳೆಯ ಕ್ಷೇತ್ರೋತ್ಸವ** : ರಾಷ್ಟ್ರೀಯ ಆಹಾರ ಭದ್ರತೆ ಯೋಜನೆಯ ಗೊಂಚಲು ಮುಂಚೂಣಿ ಪ್ರಾತ್ಯಕ್ಷಿಕೆ ಅಡಿಯಲ್ಲಿ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಇವರು ದಿನಾಂಕ 25-12-2017 ರಂದು ಅತ್ತಿಕಟ್ಟಿ ಗ್ರಾಮದ ಶ್ರೀ ರಾಮಪ್ಪ ತಳಗಡೆ ಇವರ ಹೊಲದಲ್ಲಿ ತೊಗರಿ ಬೆಳೆಯ ಟಿ.ಎಸ್-3ಆರ್ ತಳಿಯ ಕ್ಷೇತ್ರೋತ್ಸವವನ್ನು ಏರ್ಪಡಿಸಿದ್ದರು. ಗ್ರಾಮ ಪಂಚಾಯತ ಉಪಾಧ್ಯಕ್ಷರಾದ ಶ್ರೀ ಹಾಲಪ್ಪ ಚವ್ಹಾಣ ಭಾಗವಹಿಸಿ, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕ್ಷೇತ್ರೋತ್ಸವ ಕಾರ್ಯಕ್ರಮದ ಲಾಭವನ್ನು ಪಡೆಯಬೇಕೆಂದು ತಿಳಿಸಿದರು. ಕೃಷಿ ಇಲಾಖೆಯ ಕೃಷಿ ಅಧಿಕಾರಿಗಳಾದ ಶ್ರೀ ಎಸ್.ಬಿ.ರಾಮೇನಹಳ್ಳಿ ಇವರು ಭಾಗವಹಿಸಿ, ತೊಗರಿ ಬೆಳೆಗೆ ಸಮಗ್ರ ಪೋಷಕಾಂಶಗಳನ್ನು ಸಕಾಲಕ್ಕೆ ಒದಗಿಸಬೇಕು ಮತ್ತು ರೈತರು ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಲು ಸಾವಯವ ಕೃಷಿ ಪದ್ಧತಿಯನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡು ಹೆಚ್ಚಿನ ಇಳುವರಿ ಪಡೆಯಬೇಕೆಂದು ತಿಳಿಸಿದರು. ಕೇಂದ್ರದ ಬೇಸಾಯ ಶಾಸ್ತ್ರ ತಜ್ಞರಾದ ಶ್ರೀ ವ್ಹಿ.ಡಿ.ವೈಕುಂಠೆ ಇವರು ತೊಗರಿ ಬೆಳೆಯ ಉತ್ಪಾದನೆ ತಂತ್ರಜ್ಞಾನಗಳ ಬಗ್ಗೆ ರೈತರಿಗೆ ಮಾಹಿತಿ ಕೊಟ್ಟರು. ರೈತ ಮುಖಂಡರಾದ ಶ್ರೀ ರಾಮಪ್ಪ ಸೋಮಪ್ಪ ಮೇಗಲಮನಿ ಭಾಗವಹಿಸಿ ತಮ್ಮ ಹೊಲದಲ್ಲಿ ಕೈಗೊಂಡ ತೊಗರಿ ಪ್ರಾತ್ಯಕ್ಷಿಕೆ ಕೈಗೊಂಡಿದ್ದರ ಅನುಭವವನ್ನು ಹಂಚಿಕೊಂಡರು.



4) **ಶಾಲೆಯ ಮಕ್ಕಳು ಹಾಗೂ ತಾಯಂದಿರಿಗೆ ವಿಶೇಷ ಕಾರ್ಯಕ್ರಮ** : ದಿನಾಂಕ 26-12-2017 ರಂದು ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರವು ಮುಂಡರಗಿ ತಾಲೂಕಿನ ಎಕಲಾಸಪೂರ ಗ್ರಾಮದಲ್ಲಿ ಪಾರ್ವತೆವ್ವ ಹಿರೇಬಸಪ್ಪ ಹಳೇಮನಿ ಪ್ರೌಢ ಶಾಲೆಯಲ್ಲಿ ಆರೋಗ್ಯಕರ ಜೀವನಕ್ಕಾಗಿ ಉತ್ತಮ ಆಹಾರ ಕುರಿತು ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಶಾಲೆಯ ಮುಖ್ಯೋಪಾಧ್ಯಯರಾದ ಶ್ರೀ ಡಿ. ದುರ್ಗಾಪ್ರಸಾದ ಮಾತನಾಡಿ ಅಪೌಷ್ಟಿಕತೆ ಹಾಗೂ ರಕ್ತ ಹೀನತೆಯನ್ನು ಕಡಿಮೆ ಮಾಡಲು ಹಣ್ಣು, ಹಸಿರು ತರಕಾರಿಗಳು ಮಹಳ ಮುಖ್ಯ ಮತ್ತು ಆರೋಗ್ಯದಲ್ಲಾಗುವ ಬದಲಾವಣೆಗಳಿಗೆ ಮೂಲ ಕಾರಣ ಆಹಾರ ಸೇವನೆ ಎಂದು ತಿಳಿಸಿದರು.



ಕೇಂದ್ರದ ಗೃಹ ವಿಜ್ಞಾನ ವಿಷಯ ತಜ್ಞರಾದ ಡಾ॥ ಸುಧಾ ಮಂಕಣಿ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಆಹಾರ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಸಮತೋಲನ ಆಹಾರದ ಬಳಕೆ ಕಡಿಮೆ ಆಗಿದೆ. ಮಕ್ಕಳು ಬೇಕರಿ ಪದಾರ್ಥಗಳು, ಮ್ಯಾಗಿ, ನೂಡಲ್ಸ ಬಳಸುವದರಿಂದ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ತಿಳಿಸಿದರು. ಜೊತೆಗೆ ಅಕ್ಕಿ, ಸಕ್ಕರೆ, ಡಾಲ್ಡಾ, ಮೈದಾ ಪದಾರ್ಥಗಳ ಬಳಕೆ ಕಡಿಮೆ ಮಾಡಿ ಆಹಾರದಲ್ಲಿ ಸಿರಿಧಾನ್ಯಗಳಾದ ನವಣೆ, ಸಾಮೆ, ಹಾರಕ, ಬರಗು, ಸಜ್ಜೆ ಬಳಸಲು ಕರೆ ನೀಡಿದರು. ಇದೇ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ 2017-18 ನೇ ಸಾಲಿನಲ್ಲಿ ಏರ್ಪಡಿಸಿದ ಪೌಷ್ಠಿಕ ತೋಟದ ಪ್ರಾತ್ಯಕ್ಷಿಕೆ ಘಟಕಕ್ಕೆ ಭೆಟ್ಟಿಯನ್ನು ಏರ್ಪಡಿಸಲಾಯಿತು. ಸಿರಿಧಾನ್ಯಗಳ ಪೌಷ್ಠಿಕತೆ ಕುರಿತು ಹಸ್ತ ಪ್ರತಿಯನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ 50 ತಾಯಂದಿರು ಹಾಗೂ 100 ಮಕ್ಕಳು ಹಾಗೂ ಶಾಲೆಯ ಸಿಬ್ಬಂದಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

5) **ವಿಸ್ತರಣಾ ಸಿಬ್ಬಂದಿಗೆ ತರಬೇತಿ**: ದಿನಾಂಕ 28-12-2017 ರಂದು ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರವು ಕರ್ನಾಟಕ ರಾಜ್ಯದ ಪಶು ಸಂಗೋಪನಾ ಇಲಾಖೆಯ ಸಹಯೋಗದಲ್ಲಿ ಇಲಾಖೆಯ ವಿಸ್ತರಣಾ ಸಿಬ್ಬಂದಿಗೆ ತರಬೇತಿಯನ್ನು ಆಯೋಜಿಸಿತ್ತು. ಕಾರ್ಯಕ್ರಮನ್ನು ಜಿಲ್ಲಾ ಪಂಚಾಯತ ಅಧ್ಯಕ್ಷರಾದ ಶ್ರೀ ವಾಸಣ್ಣ ಕುರಡಗಿ ಅವರು ಉದ್ಘಾಟಿಸಿ ಪಶು ಸಂಗೋಪನೆಯಲ್ಲಾದ ಸಂಶೋಧನೆಗಳು ವಿಸ್ತರಣಾ ಕಾರ್ಯಕರ್ತರಿಗೆ ಮುಟ್ಟಿಸುವ ಜವಾಬ್ದಾರಿ ಬಹಳ ಮುಖ್ಯ. ಗದಗ ಜಿಲ್ಲೆಯಲ್ಲಿ ಪಶು ವೈದ್ಯರ ಕೊರತೆ ಹೆಚ್ಚಾಗಿದ್ದು, ಪಶು ವೈದ್ಯ ಪರೀಕ್ಷಕರ ಪಾತ್ರ ಬಹಳ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ತಾವೆಲ್ಲರೂ ಗ್ರಾಮದಲ್ಲಿ ಪಶು ವೈದ್ಯರಾಗಿ ಕೆಲಸ ಮಾಡಿರಿ ಎಂದು ಕರೆ ನೀಡಿದರು.

ಜಿಲ್ಲಾ ಪಂಚಾಯತ ಸದಸ್ಯರಾದ ಶ್ರೀಮತಿ ಶಕುಂತಲಾ ಮೂಲಿಮನಿ ಅವರು ಮಾತನಾಡಿ ಜಾನುವಾರುಗಳ ನಿರ್ವಹಣೆ, ಪಾಲನೆ, ಪೋಷಣೆ ಬಹಳ ಮುಖ್ಯ. ಸರಿಯಾದ ಸಮಯಕ್ಕೆ ಸೂಕ್ತ ಲಸಿಕೆಗಳು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಗ್ರಾಮದ ಜನರಿಗೆ ಸೂಕ್ತ ಮಾಹಿತಿಯನ್ನು ಒದಗಿಸಬೇಕೆಂದು ಕರೆ ನೀಡಿದರು.

ಡಾ॥ಎಸ್.ಎನ್.ಪಾಟೀಲ, ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ ಅವರು ಪ್ರಾಸ್ತಾವಿಕ ಮಾತನಾಡಿ ಅತಿಥಿಗಳನ್ನು ಸ್ವಾಗತಿಸಿದರು. ನಂತರ ಪಶುಗಳ ಆಹಾರ, ಮೇವಿನ ಉತ್ಪಾದನೆ ಹಾಗೂ ರೋಗಗಳನ್ನು ತಡೆಗಟ್ಟುವ ಕುರಿತು ತರಬೇತಿಗಳನ್ನು ನೀಡಲಾಯಿತು.

6) **ರೈತ ಸಮ್ಮೇಳನ**: ದಿನಾಂಕ 28-12-2017 ರಂದು ಗದಗ ತಾಲೂಕಿನ ಶ್ಯಾಗೋಟಿ ಗ್ರಾಮದಲ್ಲಿ ರಿಲೈಯನ್ಸ್ ಫೌಂಡೇಶನ್ ಗದಗ ಇವರು ಆಯೋಜಿಸಿದ ರೈತರ ಸಮ್ಮೇಳನದ ಕಾರ್ಯಕ್ರಮದಲ್ಲಿ ಕೇಂದ್ರದ ಶ್ರೀ ಎಸ್.ಎಚ್.ಆದಾಪೂರ ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ರೈತ ಉತ್ಪಾದಕ ಸಂಘಗಳ ಮಹತ್ವ ಮತ್ತು ಪ್ರಾಮುಖ್ಯತೆ ಕುರಿತು ಮಾತನಾಡಿ ಹೆಚ್ಚು ಹೆಚ್ಚು ಉತ್ಪಾದಕ ಸಂಘಗಳನ್ನು ಹುಟ್ಟು ಹಾಕಲು ತಿಳಿಸಿದರು.

7) **ಗೋಡಂಬಿ ವಿಚಾರ ಸಂಕಿರಣ** : ಹುಲಕೋಟಿಯ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ ಹಾಗೂ ಗೋಡಂಬಿ ಹಾಗೂ ಕೋಕೋ ಬೆಳೆಗಳ ಅಭಿವೃದ್ಧಿ ನಿರ್ದೇಶನಾಲಯ, ಕೋಚಿನ್ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 29-12-2017 ರಂದು ಜಿಲ್ಲಾ ಮಟ್ಟದ "ಗೋಡಂಬಿ ಬೆಳೆಯ ವಿಚಾರ ಸಂಕಿರಣ" ವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ॥ ವೆಂಕಟೇಶ ಹುಬ್ಬಳ್ಳಿ, ನಿರ್ದೇಶಕರು, ಗೋಡಂಬಿ ಹಾಗೂ ಕೋಕೋ ಬೆಳೆಗಳ ಅಭಿವೃದ್ಧಿ ನಿರ್ದೇಶನಾಲಯ, ಕೋಚಿನ್ ಇವರು ಮಾತನಾಡಿ ಬರಗಾಲದಿಂದ ತತ್ತರಿಸುತ್ತಿರುವ ಗದಗ ಜಿಲ್ಲೆಯ ಕೆಂಪು ಭೂಮಿಗೆ ಗೋಡಂಬಿ ಬೇಸಾಯ ಅತೀ ಸೂಕ್ತವಾಗಿದ್ದು, ರೈತರು ಹೆಚ್ಚಿನ ಕ್ಷೇತ್ರದಲ್ಲಿ ಗೋಡಂಬಿ ಬೆಳೆಯನ್ನು ಬೆಳೆದು ಜೀವನೋಪಾಯದ ಭದ್ರತೆಯ ಜೊತೆಗೆ ಆದಾಯವನ್ನು



ದ್ವಿಗುಣಗೊಳಿಸಿಕೊಳ್ಳಬಹುದು ಎಂದು ತಿಳಿಸಿದರು. ಭಾರತ ಸರಕಾರದ ಕೃಷಿ ಮಂತ್ರಾಲಯವು ಕರ್ನಾಟಕ ಸೇರಿದಂತೆ 17 ರಾಜ್ಯಗಳಲ್ಲಿ ಪ್ರತಿ ವರ್ಷ 1,50,000 ಎಕರೆ ಗೋಡಂಬಿ ಬೆಳೆಯ ಕ್ಷೇತ್ರವನ್ನು ವಿಸ್ತರಿಸುವ ಯೋಜನೆಯನ್ನು ಹೊಂದಿದೆ ಎಂದು ತಿಳಿಸಿದರು. ಇದರಲ್ಲಿ ಕರ್ನಾಟಕ ರಾಜ್ಯದಲ್ಲಿ 9000 ಎಕರೆ ಗೋಡಂಬಿ ಬೆಳೆಯನ್ನು ವಿಸ್ತರಿಸಬಹುದಾಗಿದೆ ಎಂದು ತಿಳಿಸಿದರು. ಗೋಡಂಬಿ ಬೆಳೆಯ ಉತ್ತೇಜನಕ್ಕಾಗಿ ಗದಗ, ಹಾವೇರಿ, ಉತ್ತರ ಕನ್ನಡ ಮತ್ತು ಚಿತ್ರದುರ್ಗ ಜಿಲ್ಲೆಗಳು ಕೇಂದ್ರ ಸರಕಾರದಿಂದ ಆಯ್ಕೆಯಾಗಿವೆ ಎಂದು ತಿಳಿಸಿದರು. ಮುಂದುವರೆದು ಮಾತನಾಡಿದ ಅವರು ಗದಗ ಜಿಲ್ಲೆಯಲ್ಲಿ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ 2000 ಎಕರೆ ಪ್ರದೇಶದಲ್ಲಿ ಗೋಡಂಬಿ ಬೆಳೆಯನ್ನು ವಿಸ್ತರಿಸುವ ಗುರಿ ನಿಗದಿಪಡಿಸಲಾಗಿದೆ. ಇದರ ಸದುಪಯೋಗವನ್ನು ರೈತ ಬಾಂಧವರು ಪಡೆಯಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳು ಹಾಗೂ ತಜ್ಞ ಉಪನ್ಯಾಸಕರಾಗಿ ಡಾ॥ ಟಿ.ಆರ್.ಗುರುಪ್ರಸಾದ, ಸಹ ಸಂಶೋಧನಾ ನಿರ್ದೇಶಕರು (ವಿಶ್ರಾಂತ), ತೋಟಗಾರಿಕೆ ವಿಶ್ವ ವಿದ್ಯಾಲಯ, ಬಾಗಲಕೋಟ ಇವರು ಗೋಡಂಬಿ ಬೇಸಾಯದ ವೈಜ್ಞಾನಿಕ ತಂತ್ರಜ್ಞಾನದ ಕುರಿತು ರೈತರಿಗೆ ಉಪನ್ಯಾಸ ನೀಡಿದರು ಹಾಗೂ ರೈತರ ಪ್ರಶ್ನೆಗಳಿಗೆ ಉತ್ತರಿಸಿದರು.

ಗದಗ ಜಿಲ್ಲೆ ಗೋಡಂಬಿ ಬೆಳೆ ಸಂಘದ ಅಧ್ಯಕ್ಷರಾದ ಶ್ರೀ ಜಿ.ಆರ್.ಓದುಗೌಡರ ಹಾಗೂ ಉಪಾಧ್ಯಕ್ಷರಾದ ಶ್ರೀ ಈಶ್ವರಪ್ಪ ಹಂಚಿನಾಳ ಇವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಡಾ॥ ಎಲ್.ಜಿ.ಹಿರೇಗೌಡರ, ಮುಖ್ಯಸ್ಥರು, ಕೆವಿಕೆ ಇವರು ಅತಿಥಿಗಳನ್ನು ಸ್ವಾಗತಿಸಿ ಮಾತನಾಡಿ ಈ ವರ್ಷದಲ್ಲಿ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರವು ಗೋಡಂಬಿ ನಿರ್ದೇಶನಲಾಯದ ಸಹಯೋಗದೊಂದಿಗೆ ಗದಗ ಜಿಲ್ಲೆಯಲ್ಲಿ 700 ಎಕರೆ ಹೊಲದಲ್ಲಿ ಗೋಡಂಬಿ ಬೆಳೆಯನ್ನು ನಾಟಿ ಮಾಡಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ 150 ಕ್ಕೂ ಹೆಚ್ಚು ಜನ ಗೋಡಂಬಿ ಬೆಳೆಗಾರರು ಹಾಗೂ ಗೋಡಂಬಿ ಬೆಳೆಯಲು ಆಸಕ್ತಿ ಇರುವ ರೈತರು ಪಾಲ್ಗೊಂಡಿದ್ದರು.

## ಕ್ಷೇತ್ರ ಪ್ರಯೋಗಗಳು

1) ಮುಂಡರಗಿ ತಾಲೂಕು ಎಕಲಾಸಪೂರ ಗ್ರಾಮದಲ್ಲಿ ಉಸುಕು ಹೊದಿಕೆ ಹೊಲದಲ್ಲಿ ಹಿಂಗಾರಿ ಜೋಳದ ಬೆಳೆಯಲ್ಲಿ ಎಸ್.ಪಿ.ವಿ-2217 ಹಾಗೂ ಬಿ.ಜೆ.ವಿ-44 ತಳಿಗಳ ಪರಿಶೀಲನೆಯನ್ನು 4.8 ಹೆಕ್ಟೇರ ಕ್ಷೇತ್ರದಲ್ಲಿ 6 ಜನ ರೈತರ ಹೊಲದಲ್ಲಿ ಕ್ಷೇತ್ರ ಪ್ರಯೋಗಗಳನ್ನು ಕೈಗೊಳ್ಳಲಾಯಿತು.
2) ನರಗುಂದ ತಾಲೂಕು ಖಾನಾಪೂರ ಗ್ರಾಮದಲ್ಲಿ ಕಡಲೆ ಬೆಳೆಯಲ್ಲಿ ಎನ್.ಬಿ.ಇ.ಜಿ-3, ಜಾಕಿ-9218 ಹಾಗೂ ಜಿ.ಬಿ.ಎಮ್-2 ತಳಿಗಳಲ್ಲಿ ಹೆಚ್ಚಿನ ಇಳುವರಿಗಾಗಿ ಕ್ಷೇತ್ರ ಪ್ರಯೋಗಗಳನ್ನು 3.6 ಹೆಕ್ಟೇರ್ ಕ್ಷೇತ್ರದಲ್ಲಿ 3 ಜನ ರೈತರ ಹೊಲದಲ್ಲಿ ಕೈಗೊಳ್ಳಲಾಯಿತು.

## ಮುಂಚೂಣಿ ಪ್ರಾತ್ಯಕ್ಷಿಕೆಗಳು

1) ನರಗುಂದ ತಾಲೂಕು ಖಾನಾಪೂರ ಗ್ರಾಮದಲ್ಲಿ ಗೋದಿ ಬೆಳೆಯಲ್ಲಿ ಯು.ಎ.ಎಸ್-334 ತಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆಯನ್ನು 4 ಹೆಕ್ಟೇರ್ ಕ್ಷೇತ್ರದಲ್ಲಿ 10 ಜನ ರೈತರ ಹೊಲದಲ್ಲಿ ಕೈಗೊಳ್ಳಲಾಯಿತು.
2) ಗದಗ ಜಿಲ್ಲೆಯ ಮಾಡೊಳ್ಳಿ, ಕೊಚಲಾಪೂರ, ಖಾನಾಪೂರ ಮತ್ತು ಬಿಂಕದಕಟ್ಟಿ ಗ್ರಾಮಗಳಲ್ಲಿ ಹಿಂಗಾರು ಜೋಳದ ಎಸ್.ಪಿ.ವಿ-2217 ಹಾಗೂ ಬಿ.ಜೆ.ವಿ-44 ತಳಿಗಳ ಪ್ರಾತ್ಯಕ್ಷಿಕೆಗಳನ್ನು 8 ಹೆಕ್ಟೇರ ಕ್ಷೇತ್ರದಲ್ಲಿ 20 ಜನ ರೈತರ ಹೊಲದಲ್ಲಿ ಕೈಗೊಳ್ಳಲಾಯಿತು.
3) ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿ ಬೇಳೆ ಕಾಳುಗಳಲ್ಲಿ ಗೊಂಚಲು ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕಡಲೆ ಬೆಳೆಯಲ್ಲಿ ನರಗುಂದ ತಾಲೂಕು ಖಾನಾಪೂರ ಗ್ರಾಮದಲ್ಲಿ ಜಾಕಿ-9218 ತಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆಯನ್ನು 40 ಹೆಕ್ಟೇರ್ ಕ್ಷೇತ್ರದಲ್ಲಿ 100 ಜನ ರೈತರ ಹೊಲದಲ್ಲಿ ಕೈಗೊಳ್ಳಲಾಯಿತು.

4) ಭಾರತೀಯ ಎಣ್ಣೆಕಾಳು ಸಂಶೋಧನಾ ಸಂಸ್ಥೆ, ಹೈದರಾಬಾದ ಇವರ ಸಹಯೋಗದಿಂದ ರೋಣ ತಾಲೂಕು ಕರಮುಡಿ ಗ್ರಾಮದಲ್ಲಿ ಕುಸುಬೆ ಬೆಳೆಯ ಪ್ರಾತ್ಯಕ್ಷಿಕೆಯನ್ನು 40 ಹೆಕ್ಟೇರ್ ಕ್ಷೇತ್ರದಲ್ಲಿ 100 ಜನ ರೈತರ ಹೊಲದಲ್ಲಿ ಪಿ.ಬಿ.ಎನ್.ಎಸ್.-12 ತಳಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಗಿದೆ.
5) ಪೌಷ್ಠಿಕ ತೋಟಗಳ ಪ್ರಾತ್ಯಕ್ಷಿಕೆಯನ್ನು ಎಕಲಾಸಪೂರ (ಮುಂಡರಗಿ) ಹಾಗೂ ಹುಲಕೋಟಿ (ಗದಗ) ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಯಿತು.
6) ನಿಕ್ರಾ ಯೋಜನೆಯಡಿ ಮಹಾಲಿಂಗಪೂರ ಗ್ರಾಮದಲ್ಲಿ ಹಿಂಗಾರು ಜೋಳದ ಬೆಳೆಯಲ್ಲಿ 30 ಜನ ರೈತರಿಗೆ 30 ಎಕರೆ ಕ್ಷೇತ್ರದಲ್ಲಿ ಎಸ್.ಪಿ.ವಿ-2217 ತಳ ಹಾಗೂ 50 ಜನ ರೈತರಿಗೆ 50 ಎಕರೆ ಪ್ರದೇಶದಲ್ಲಿ ಎಮ್ 35-1 ತಳ ಪ್ರಾತ್ಯಕ್ಷಿಕೆ ಕೈಗೊಳ್ಳಲಾಯಿತು.
7) ಕಡಲೆ ಬೆಳೆಯಲ್ಲಿ 10 ಜನ ರೈತರಿಗೆ 10 ಎಕರೆ ಪ್ರದೇಶದಲ್ಲಿ ಜಾಕಿ 9218 ಕಡಲೆ ತಳ ಪ್ರಾತ್ಯಕ್ಷಿಕೆಯನ್ನು ನಿಕ್ರಾ ಯೋಜನೆಯಡಿ ಮಹಾಲಿಂಗಪೂರ ಗ್ರಾಮದಲ್ಲಿ ಕೈಗೊಳ್ಳಲಾಯಿತು.
8) ಮಹಾಲಿಂಗಪೂರ ಗ್ರಾಮದ ನಿಕ್ರಾ ಯೋಜನೆ ಅಡಿ ಹುರಳಿ ಬೆಳೆಯಲ್ಲಿ ಜಿ.ಪಿ.ಎಮ್-6 ತಳಯ ಪ್ರಾತ್ಯಕ್ಷಿಕೆಯನ್ನು 5 ಜನ ರೈತರ 5 ಎಕರೆ ಪ್ರದೇಶದಲ್ಲಿ ಕೈಗೊಳ್ಳಲಾಯಿತು.

## ಅಕ್ಟೋಬರ್-ಡಿಸೆಂಬರ ತ್ರೈಮಾಸಿಕದಲ್ಲಿ ಸಂಘಟಿಸಿದ ತರಬೇತಿಗಳು

1) ಅಕ್ಟೋಬರ ಮಾಹೆಯಲ್ಲಿ ಹಿಂಗಾರಿ ಬೆಳೆಗಳಲ್ಲಿ ಸಮಗ್ರ ಬೇಸಾಯ ಪದ್ಧತಿಗಳ ಕುರಿತು ಖಾನಾಪೂರ (ನರಗುಂದ ತಾಲೂಕು) ಹಾಗೂ ಕರಮುಡಿ (ರೋಣ ತಾಲೂಕು) ಗ್ರಾಮಗಳಲ್ಲಿ 210 ಜನ ರೈತರಿಗೆ ನಾಲ್ಕು ತರಬೇತಿಗಳನ್ನು ಆಯೋಜಿಸಲಾಯಿತು.
2) ವೈಜ್ಞಾನಿಕ ಕೋಳಿ ಸಾಕಾಣಿಕೆ ಕುರಿತು 2 ತರಬೇತಿಗಳನ್ನು 44 ಜನ ರೈತರಿಗೆ ಆಯೋಜಿಸಲಾಯಿತು.
3) ಉದ್ಯಮಶೀಲತೆ ಮತ್ತು ಬಹು ಚಟುವಟಿಕೆಗಳ ಕುರಿತು 49 ಜನ ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ 2 ತರಬೇತಿಗಳನ್ನು ಆಯೋಜಿಸಲಾಯಿತು.
4) 23-10-2017 ರಂದು ತೋಟಗಳ ನಿರ್ವಹಣೆ ಕುರಿತು 14 ಜನ ರೈತರಿಗೆ ಒಂದು ದಿನದ ತರಬೇತಿಯನ್ನು ಕೇಂದ್ರದಿಂದ ಆಯೋಜಿಸಲಾಯಿತು.
5) 24-11-2017 ರಂದು ಸಾವಯವ ಕೃಷಿ ಹಾಗೂ ಎರೆಹುಳು ಗೊಬ್ಬರ ತಯಾರಿಕೆ ಕುರಿತು 82 ಜನ ರೈತರಿಗೆ ಹಾಗೂ 08-12-2017 ರಂದು ಒಂದು ದಿನದ ತರಬೇತಿಗಳನ್ನು ಆಯೋಜಿಸಲಾಯಿತು
6) ಸಮಗ್ರ ಕೀಟ ನಿರ್ವಹಣೆ ಕುರಿತು 271 ಜನ ರೈತರಿಗೆ ಏಳು ತರಬೇತಿಗಳನ್ನು ಆಯೋಜಿಸಲಾಯಿತು.
7) ಮುಂಡರಗಿ ತಾಲೂಕಿನ ಲಕ್ಕುಂಡಿ ಹಾಗೂ ಕಲಕೇರಿ ಸರ್ಕಲನಲ್ಲಿ ಕಾರ್ಯನಿರ್ವಹಿಸುತ್ತಿರುವ 63 ಜನ ಅಂಗನವಾಡಿ ಶಿಕ್ಷಕಿಯರಿಗೆ ಆಹಾರ, ಆರೋಗ್ಯ ಹಾಗೂ ಸಿರಿಧಾನ್ಯಗಳ ಮಹತ್ವ ಕುರಿತು ತರಬೇತಿಗಳನ್ನು ನವೆಂಬರ್ ತಿಂಗಳನಲ್ಲಿ ನೀಡಲಾಯಿತು. ಸಿರಿಧಾನ್ಯದ ಪೌಷ್ಠಿಕತೆಯ ಕುರಿತು ಹಸ್ತ ಪ್ರತಿಗಳನ್ನು ವಿತರಿಸಲಾಯಿತು.
8) ನಿಕ್ರಾ ಯೋಜನೆಯಡಿ 5 ತರಬೇತಿಗಳನ್ನು 215 ಜನ ರೈತರಿಗೆ ಹಾಗೂ ರೈತ ಮಹಿಳೆಯರಿಗೆ ಸಾವಯವ ಕೃಷಿ, ಕಿರು ಧಾನ್ಯಗಳ ಮೌಲ್ಯವರ್ಧನೆ, ಕೊಳವೆ ಬಾವಿಗಳ ಮೂಲಕ ಅಂತರ್ಜಲ ಮರುಪೂರಣ, ಪ್ರಮುಖ ಬೆಳೆಗಳ ಕೀಟ, ರೋಗ ಹಾಗೂ ಸಮಗ್ರ ಪೋಷಕಾಂಶಗಳ ಕುರಿತು ತರಬೇತಿಗಳನ್ನು ಹಮ್ಮಿಕೊಳ್ಳಲಾಗಿತ್ತು.

## ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು

1) ಅಕ್ಟೋಬರ, ನವೆಂಬರ, ಡಿಸೆಂಬರ 2017 : ಮಲಪ್ರಭಾ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಹಾಗೂ ತುಂಗಭದ್ರಾ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಮುನಿರಾಬಾದ ಇವರ ಪ್ರಾಯೋಜಿತ ಕಾರ್ಯಕ್ರಮಗಳಲ್ಲಿ 1063 ಜನ ರೈತರಿಗೆ ತರಬೇತಿಗಳನ್ನು ನೀಡಲಾಯಿತು. ತರಬೇತಿಗಳಲ್ಲಿ ಪ್ರಮುಖವಾಗಿ ನೀರಿನ ಸಂರಕ್ಷಣೆ ಹಾಗೂ ಬಳಕೆ ಮತ್ತು ಅಚ್ಚುಕಟ್ಟು ಪ್ರದೇಶದಲ್ಲಿ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳು, ಹೈನುಗಾರಿಕೆ ಹಾಗೂ ಆಹಾರದಲ್ಲಿ ಸಿರಿಧಾನ್ಯಗಳ ಮಹತ್ವ ಕುರಿತು ತರಬೇತಿಗಳನ್ನು ನೀಡಲಾಯಿತು.

2) ಅಕ್ಟೋಬರ್ 25-26, 2017: ವಿಜ್ಞಾನ ಮತ್ತು ತಂತ್ರಜ್ಞಾನ ನಿರ್ದೇಶನಾಲಯ ಇವರ ನೆರವಿನೊಂದಿಗೆ "ಸೇವಕ್" ಸ್ವಯಂ ಸೇವಾ ಸಂಸ್ಥೆ, ಬೆಳಗಾವಿ ಇವರ ಪ್ರಾಯೋಜಕತ್ವದಲ್ಲಿ ಯುವತಿಯರು ಹಾಗೂ ಮಹಿಳೆಯರಲ್ಲಿ ಕಬ್ಬಿಣಾಂಶ ಕೊರತೆ ನಿಯಂತ್ರಣಕ್ಕಾಗಿ ಪೌಷ್ಠಿಕ ಆಹಾರ ಕುರಿತು 73 ಜನ ಯುವತಿಯರು ಹಾಗೂ ಮಹಿಳೆಯರಿಗೆ 2 ದಿನದ ತರಬೇತಿಯನ್ನು ಆಯೋಜಿಸಲಾಯಿತು
3) ಅಕ್ಟೋಬರ್ 24-ನವೆಂಬರ 13, 2017: ಗಿಟಸರ್ಡ, ಹುಲಕೋಟಿ ಇವರ ಪ್ರಾಯೋಜಕತ್ವದಲ್ಲಿ ಅಸುಂಡಿ ಗ್ರಾಮದಲ್ಲಿ ವಸ್ತ್ರ ವಿನ್ಯಾಸ ಕುರಿತು 27 ಜನ ಯುವತಿಯರಿಗೆ 20 ದಿನಗಳ ತರಬೇತಿಯನ್ನು ಆಯೋಜಿಸಲಾಯಿತು.
4) ನವೆಂಬರ 20-25, 2017 : ಗಿಟಸರ್ಡ, ಹುಲಕೋಟಿ ಇವರ ಪ್ರಾಯೋಜಕತ್ವದಲ್ಲಿ 6 ದಿನಗಳ ಉದ್ಯಮಶೀಲತೆ ಮತ್ತು ಮಸಾಲೆ ಪುಡಿ ತಯಾರಿಕೆ, ಪ್ಯಾಕಿಂಗ್, ಲೇಬಲ್ಲಿಂಗ ಮತ್ತು ಲೈಸನ್ಸ ಪಡೆಯುವದರ ಕುರಿತು ತರಬೇತಿಯನ್ನು ಆಯೋಜಿಸಲಾಯಿತು. ಅಸುಂಡಿ ಹಾಗೂ ಬಿಂಕದಕಟ್ಟಿ ಗ್ರಾಮಗಳ 30 ಜನ ಮಹಿಳೆಯರು ಭಾಗವಹಿಸಿದ್ದರು.
5) ಗಿಟಸರ್ಡ ಇವರ ಪ್ರಾಯೋಜಕತ್ವದಲ್ಲಿ ಕೇಂದ್ರವು 32 ಜನ ಯುವಕರಿಗೆ ವೈಜ್ಞಾನಿಕ ಹೈನುಗಾರಿಕೆ ತರಬೇತಿಯನ್ನು ಏರ್ಪಡಿಸಿತು.

## ರೇಡಿಯೋ / ಟಿ.ವಿ ಕಾರ್ಯಕ್ರಮಗಳು

- ಡಾ॥ ಸುಧಾ ಮಂಕಣಿ, ವಿಷಯ ತಜ್ಞರು (ಗೃಹ ವಿಜ್ಞಾನ) ಇವರು ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಕುರಿತು ದಿನಾಂಕ 14-12-2017 ರಂದು ರೇಡಿಯೋ ಸಂದರ್ಶನ ನೀಡಿದರು.

- ಶ್ರೀ ಎಸ್.ಕೆ.ಮುದ್ಲಾಪೂರ, ವಿಷಯ ತಜ್ಞರು (ಸಸ್ಯ ಸಂರಕ್ಷಣೆ) ಇವರು ಮೆಣಸಿನಕಾಯಿ ಬೆಳೆಯಲ್ಲಿ ರೋಗ ಹಾಗೂ ಕೀಟಗಳ ಹತೋಟಿ ಕುರಿತು ದಿನಾಂಕ 15-12-2017 ರಂದು ಚಂದನ ಟಿವಿಯಲ್ಲಿ ದೂರದರ್ಶನ ಕಾರ್ಯಕ್ರಮವನ್ನು ನೀಡಿರುವರು.


ಪ್ರಧಾನ ಸಂಪಾದಕರು:
ಡಾ॥ ಎಲ್.ಜಿ.ಹಿರೇಗೌಡರ
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

ಸಂಪಾದಕರು:
ಡಾ॥ ಸುಧಾ ರಾಯನಗೌಡರ
ವಿಜ್ಞಾನಿಗಳು (ಗೃಹ ವಿಜ್ಞಾನ)

ಕಾರ್ಯಕ್ರಮಗಳ ಸಂಯೋಜಕರು:

ಶ್ರೀ ವ್ಹಿ.ಡಿ.ವೈಕುಂಠೆ, ವಿಷಯ ತಜ್ಞರು (ಬೇಸಾಯ ಶಾಸ್ತ್ರ)
ಶ್ರೀ ಎಸ್.ಕೆ.ಮುದ್ಲಾಪೂರ, ವಿಷಯ ತಜ್ಞರು (ಸಸ್ಯ ಸಂರಕ್ಷಣೆ)
ಶ್ರೀ ಕೆ.ಟಿ.ಪಾಟೀಲ, ವಿಷಯ ತಜ್ಞರು (ತೋಟಗಾರಿಕೆ)
ಶ್ರೀ ಎನ್.ಎಚ್.ಭಂಡಿ, ವಿಷಯ ತಜ್ಞರು (ಮಣ್ಣು ವಿಜ್ಞಾನ)
ಶ್ರೀ ಎಸ್.ಎಚ್. ಆದಾಪೂರ, ವಿಷಯ ತಜ್ಞರು (ಕೃಷಿ ವಿಸ್ತರಣೆ)
ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ
ಡಾ॥ ಬಿ.ಎಮ್.ಮುರಗೋಡ, ಕಾರ್ಯಕ್ರಮ ಸಹಾಯಕರು (ಪಶು ಸಂಗೋಪನೆ)

ವಿನ್ಯಾಸ ಹಾಗೂ ಅಕ್ಷರ ಜೋಡಣೆ:
ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕ ಯಂತ್ರ)

ಸಹಾಯ:
ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು

ಮುದ್ರಕರು ಹಾಗೂ ಪ್ರಕಾಶಕರು: ಡಾ॥ ಎಲ್.ಜಿ.ಹಿರೇಗೌಡರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ-582205, ಗದಗ ಜಿಲ್ಲೆ, ಕರ್ನಾಟಕ ರಾಜ್ಯ
ಫೋನ್: (08372)289606, ಇ-ಅಂಚೆ:kvkhulkoti@gmail.com, ಅಂತರ್‌ಜಾಲ: www.khpkvk.org